## ಮಾತುಕತೆ

ಅಮೆರಿಕಕ್ಕೆ ಹೋದೆ. ಅಲ್ಲಿಯೂ ನನ್ನ ತಿಳಿವಳಿಕೆಯನ್ನು ಪ್ರಭಾವಿಸುವ ಕೆಲ ಓದು ಸಾಧ್ಯ ಆಯ್ತು. ಅಂದ್ರೆ ಒಂದು ಸಾಹಿತ್ಯ ಕೃತಿ ಯಾವುದೇ ಕಾಲದಲ್ಲಿ ಸೃಷ್ಟಿಯಾಗಿದ್ರೂ, ಆ ಕಾಲದ ಹಿನ್ನೆಲೆಯಲ್ಲಿ ಅದು ಸೃಷ್ಟಿಯಾಗಿರ್ತದೆ. ಜೊತೆಗೆ ಅದು ನಮ್ಮ ಕಾಲಕ್ಕೆ ಹೇಗೆ ಕನೆಕ್ಟ್ ಆಗುತ್ತದೆ ಅನ್ನೋದ್ರ ಬಗ್ಗೆ 'ಶೇಕ್ಸ್‌ಪಿಯರ್ ಅವರ್ ಕಾಂಟೆಪರರಿ' ಕೃತಿ ಚರ್ಚೆ ಮಾಡಿತ್ತು. ಆಗೆಲ್ಲ ನಾನು ಟಾಲ್‌ಸ್ಟಾಯ್ ಅವರ 'ಅನ್ನಾ ಕರೆನೀನಾ' ಪಾಠ ಮಾಡ್ತಿದ್ದೆ. ಬ್ರೆಕ್ಟ್‌ನ 'ಗೆಲಿಲಿಯೊ' ಪಾಠ ಮಾಡ್ತಿದ್ದೆ. ಕಾಫ್ಕಾನ 'ದಿ ಟ್ರಯಲ್' ಪಾಠ ಮಾಡ್ತಿದ್ದೆ. ಇದೆಲ್ಲವನ್ನು ಕಲಿಸುವಾಗ ಇದರ ಕುರಿತು ಇದ್ದ ವೆಸ್ಟರ್ನ್ ಕ್ರಿಟಿಸಿಸಂ ಓದುವ ಅವಕಾಶ ಸಿಗ್ತು. ಓದು ವಿಸ್ತಾರ ಆಯಿತು ಅನ್ನಿಸ್ತದೆ. ಇನ್ನೊಂದು ಕಾರಣ ಏನು ಅಂತಂದ್ರೆ, ಕಲ್ಚರಲ್ ಆಂಥ್ರಪಾಲಜಿ ಕಲಿಸಬೇಕಾಗಿ ಬಂತು. ಜಿ.ಎಸ್. ಶಿವರುದ್ರಪ್ಪನವರು ಹೊರಿಸಿದ ಭಾರ ಅದು. ಓದಿಕೊಂಡು ಪಾಠ ಮಾಡಬೇಕಾಯ್ತು. ಆವಾಗ ಮಾರ್ಕ್ಸಿಸ್ಟ್ ಹಿನ್ನೆಲೆಯ ಆಂಥ್ರಪಾಲಿಜಿಸ್ಟ್‌ಗಳ ಬರವಣಿಗೆಯ ಪರಿಚಯವಾಯಿತು. ಇದು ಬಹುಮಟ್ಟಿಗೆ ನನ್ನ ತಿಳಿವಳಿಕೆಗಳನ್ನ ಪ್ರಭಾವಿಸಿರಬಹುದು.

ಆಮೇಲೆ ಮಾರ್ಕ್ಸ್‌ವಾದದ ಬಗೆಗಿನ ನನ್ನ ಅಭಿಪ್ರಾಯಗಳು ವಿಭಿನ್ನವಾಗಿ ರೂಪುಗೊಳ್ಳತೊಡಗಿದವು. ಮಾರ್ಕ್ಸಿಸಂ ಬಗ್ಗೆ ಬಹಳ ನಿರ್ಲಕ್ಷ್ಯ ಇರಬಹುದಾದ ರೈಟರ್ ಕೂಡ ಅದ್ಭುತವಾದ ಮಾರ್ಕ್ಸಿಸ್ಟ್ ಕೃತಿ ಬರೀಬಹುದು. ಇದನ್ನ ಏಂಗೆಲ್ಸ್ ತಾನೇ ಹೇಳಿದ್ದು. ಜೋಲಾ ಬಗ್ಗೆ ಆತ ಇದನ್ನು ಹೇಳಿದ. ಜೋಲಾ ಮಧ್ಯಮವರ್ಗವನ್ನು ಎತ್ತಿಹಿಡಿಯೋದಕ್ಕಾಗಿ ಬರೀತಾನೆ. ಚೆಕಾಫ್ ನಾಟಕಗಳ ಬಗ್ಗೆ ಕೂಡ ಇದನ್ನು ಹೇಳಬಹುದು. ಜಮೀನ್ದಾರಿ ವರ್ಗದ ಶ್ರೇಷ್ಠತೆಯನ್ನು ಹೇಳೋಕೆ ಅವನು ಬರೀತಿದಾನೆ. ಆದರೆ ಅವೆಲ್ಲ ಕುಸಿದು ಬೀಳ್ತಿರೋದು ನಾಟಕದಲ್ಲಿ ಕಾಣಿಸ್ತಿದೆ. 'ಚೆರ್ರಿ ಆರ್ಚೆಡ್' ನಾಟಕದಲ್ಲಿ ಇದನ್ನ ನೋಡಬಹುದು. ಹಾಗೆ ನೋಡಿದರೆ ಇವರೆಲ್ಲ ಮಾರ್ಕ್ಸಿಸ್ಟ್‌ರಲ್ಲ. ಕೆಲವೊಮ್ಮೆ ಮಾರ್ಕ್ಸಿಸ್ಟ್‌ರ ವಿರೋಧಿಗಳು. ಆದರೆ ಅವರ ಕೃತಿಗಳು ಇದರ ವಿರುದ್ಧ ದಿಕ್ಕಿನಲ್ಲಿ ರಚನೆಯಾಗ್ತಿವೆ. ದಾಸ್ತೋವಸ್ಕಿ ಕ್ರಿಶ್ಚಿಯನ್ ಸಂಪ್ರದಾಯದ ಬಗ್ಗೆ ನಂಬಿಕೆ ಉಳ್ಳಂಥವನು. ಆದರೆ ಅವನ ಕಾದಂಬರಿಗಳಲ್ಲಿ ಆ ಧಾರ್ಮಿಕ ಚೌಕಟ್ಟುಗಳೇ ಮನುಷ್ಯನನ್ನು ಎಷ್ಟು ಹುಸಿಯನ್ನಾಗಿ ಮಾಡ್ತವೆ ಅನ್ನೋದು ಕೂಡ ಇದೆ. ಒಬ್ಬ ಓದುಗನಾಗಿ ನನಗೆ ಇಂಥ ತಿಳಿವಳಿಕೆ ದಕ್ಕತಾ ಇದೆ. ರೈಟರ್ಸ್ ಸಮಸ್ಯೆ ಏನಿದೆಯೊ ನನಗದು ಮುಖ್ಯವಲ್ಲ. ಒಬ್ಬ ಓದುಗನಾಗಿ ನನಗೆ ಏನು ತಲುಪ್ತಾ ಇದೆ ಅನ್ನೋದನ್ನು ನೋಡ್ತಾ ಇರ್ತೇನೆ. 'ಮಾಡಿದ್ದುಣ್ಣೊ ಮಹಾರಾಯ'ದಲ್ಲಿ ಅವನು ಹೇಳ್ತಿರೋದೆ ಒಂದು, ಆಗ್ತಿರೋದೆ ಇನ್ನೊಂದು. ರಾಜತ್ವವನ್ನು ಹೊಗಳೋದಕ್ಕೆ ಅವನು ಬರೀತಿರ್ತಾನೆ. ಆದರೆ ರಾಜತ್ವ ಕಾದಂಬರಿಯಲ್ಲಿ ಕುಸಿದು ಬೀಳ್ತಿದೆ. ಒಂದು ಕೃತಿಯನ್ನ ಯಾಕೆ ಓದಬೇಕು? ಈ ಕೃತಿ ಬದುಕಿನ ಭಾಗ ಯಾಕಾಗ್ತದೆ? ಅನ್ನೋದಕ್ಕೆ ಸಮರ್ಥನೆಯನ್ನೇ ನಾವು ಕೊಡೋದಿಲ್ಲ. ಪರಿಕರಗಳನ್ನ ನಾವು ಹೇಳ್ತಾನೆ ಇಲ್ಲ. ಅದ್ರಿಂದ ನಾವು ಕ್ರಿಟಿಕ್ಸ್‌ಗಳ ಮೇಲೆ ಡಿಪೆಂಡ್ ಆಗ್ತೀವಿ. ಇಲ್ಲವೇ ರೈಟರ್ಸ್‌ಗಳ ಕಥೆಗಳನ್ನ ಹೇಳ್ತೀವಿ. ಸಿಲೆಬಸ್ ಮಾಡುವಾಗ ಕವಿ-ಕಾವ್ಯ ಪರಿಚಯ ಅಂತ ಒಂದು ಭಾಗ ಇರ್‍ತಾ ಇತ್ತು. ಇದು ಬೇಕಾಗಿಲ್ಲ ಅಂತ ತೆಗೆದು ಹಾಕ್ಬಿಟ್ಟೆ. ಅನೇಕ ಶಿಕ್ಷಕರು ಬೇಸರ ಮಾಡ್ಕೊಂಡ್ರು. ಇದು ಪುಸ್ತಕದ ಕೊನೆಗೆ ಇಲ್ದೇ ಇದ್ರೆ ನಾವು ಹೆಂಗೆ ಕಲಿಸೋದು ಅಂತ. ಎಷ್ಟೋ ಸಲ ಈ ಲೇಖಕರ ಹೆಸರು ಕೂಡ ತೆಗೆದು ಹಾಕ್ಬೇಕು ಅನ್ನೋನು ನಾನು. ಅದರ ಮೂಲವನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಬೇಕಾದರೆ ಆಮೇಲೆ ಹುಡುಕಿಕೊಂಡು ಹೋಗ್ಲಿ. ಕಳೆದ ವರ್ಷ ಪಠ್ಯಪುಸ್ತಕಗಳ ಪರಿಷ್ಕರಣೆಯ ಗಲಾಟೆ ನಡೀತಲ್ಲ. ಆಗ ನಮ್ಮ ಅನೇಕ ರೈಟರ್‍ರು 'ನನ್ನ ಪುಸ್ತಕ ಪಠ್ಯವಾಗೋದಕ್ಕೆ ನಾನು ಕೊಡೋದಿಲ್ಲ' ಅಂತ ಹಟ ಹಿಡಿದಿದ್ರು. ದೇವನೂರು ಮಹಾದೇವರನ್ನು ಒಳಗೊಂಡು. ಎಷ್ಟರಮಟ್ಟಿಗೆ ಅವ್ರೆಲ್ಲ ಅದನ್ನ ಓನ್ ಮಾಡ್ತಿದ್ರು ಅಂದ್ರೆ ನನಗೆ ಅಚ್ಚರಿ ಆಗ್ಬಿಡ್ತು. ಒಂಥರ ತಮ್ಮ ಬರವಣಿಗೆ ಬಗ್ಗೆ ಓನರ್‌ಶಿಪ್‌ನ್ನು ಕ್ಲೇಮ್ ಮಾಡ್ತಾ ಇದ್ರು. ನನ್ನ ಬಿಟ್ಟು ಅದಿಲ್ಲ ಅಥವಾ ಅದನ್ನು ಬಿಟ್ಟು ನಾನಿಲ್ಲ ಅನ್ನೋ ತರಹ. ಬೇಕಾಗಿಲ್ಲ ಇದು ಅಂತ.

◆ **ನೀವು ಪಾಶ್ಚಾತ್ಯ ವಿಮರ್ಶಾ ತತ್ವಗಳ ಪ್ರಭಾವವನ್ನ ಹೇಳಿದ್ರಿ. ಆದರೆ ಒಂದು ಹಂತದಲ್ಲಿ 'ಕನ್ನಡಿಗಳಿನ್ನು ಸಾಕು' ಅಂತ ವಾದಿಸಿದ್ರಿ. ಪಠ್ಯವನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಪಠ್ಯದ ಜಗತ್ತು ಸಾಕು. ಅದರೊಳಗಿನಿಂದಲೇ ಅರ್ಥದ ಸ್ತರಗಳನ್ನು**